ಇಂದು ದಿನಾಂಕಃ 31.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** 2 ನೇ ಪ್ರತಿವಾದಿಯ ಪರ ಶ್ರೀ. ಆರ್.ಪಿ.ಹೆಚ್. ವಕೀಲರಿಂದಃ

1. ನನ್ನ ತಂದೆಯ ಹೆಸರು ನಾಗೇಂದ್ರಪ್ಪ ಹಾವೇರಿ ಮತ್ತು ತಾಯಿಯ ಹೆಸರು ರತ್ನಮ್ಮ ಹಾವೇರಿ. ನನ್ನ ತಂದೆ ತಾಯಿಗೆ ನಾನು ಮತ್ತು ರಾಜಪ್ಪ ಇಬ್ಬರು ಮಕ್ಕಳು. ರಾಜಪ್ಪನಿಗೆ ಮದುವೆ ಆಗಿರುತ್ತದೆ. ಸದರಿಯರವರು ಮದುವೆಯಾದ 2 ವರ್ಷಕ್ಕೆ ಪೋತಿಯಾಗಿರುತ್ತಾನೆ. ಸದರಿಯರವರ ಹೆಂಡತಿ ರೇಖಾ ಎಂದರೆ ಪ್ರತಿವಾದಿ 2. ರಾಜಪ್ಪನ ಪೋತಿಯ ಸಮಯದಲ್ಲಿ ಪ್ರತಿವಾದಿ 2 ರವರು ಗರ್ಭಿಣಿ ಇದ್ದರು ಎಂದರೆ ಸರಿ. ಪ್ರತಿವಾದಿ 2 ರವರಿಗೆ ಗಂಡು ಮಗು ಆಗಿರುತ್ತದೆ ಎಂದು ಬೇರೆಯವರಿಂದ ತಿಳಿದಿರುತ್ತದೆ. ಮುಂದುವರೆದು ಪ್ರತಿವಾದಿ 2 ರವರು ಆಗ ಹೋದವರು ಮರಳಿ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

2. ಪ್ರತಿವಾದಿ 2 ರವರ ಮಗುವನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿ 2 ರವರ ಮಗನ ಹೆಸರು ಗೋಕುಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 2 ರವರ ಮಗನ ಹೆಸರು ತಿಳಿದುಕೊಳ್ಳಲು ಪ್ರಯತ್ನಪಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯನ್ನು 6 ಆಸ್ತಿಗಳ ಮೇಲೆ ಹೂಡಿರುತ್ತೇನೆ. ದಾವಾ ಆಸ್ತಿಗಳ ಸರ್ವೇ ನಂಬರ ನನಗೆ ಸರಿಯಾಗಿ ನೆನಪಿಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಹೂಡುವ ಸಮಯದಲ್ಲಿ ದಾವಾ ಶೇಡ್ಯೂಲ್‌ನ 6 ನೇ ಆಸ್ತಿಯ್ನನು ಸೇರಿಸಿರಲಿಲ್ಲ ಎಂದರೆ ಸರಿ. ಸದರಿ ದಾವಾ ಆಸ್ತಿಯನ್ನು ಪ್ರತಿವಾದಿ 2 ರವರು ನಮ್ಮ ಅಣ್ಣನ ಪೋತಿ ನಂತರ ತಮ್ಮ ಹೆಸರಿಗೆ ಬರೆಸಿಕೊಂಡಿದ್ದರು, ಆದ್ದರಿಂದ ಸದರಿ ಆಸ್ತಿಯನ್ನು ಸೇರಿಸಿರಲಿಲ್ಲ.

3. ದಾವಾ ಆಸ್ತಿಗಳನ್ನು ಹೊರತುಪಡಿಸಿ ನನ್ನ ತಂದೆ ಹೆಸರಿಗೆ ನಾಗವಂದ ಗ್ರಾಮ ವಿ.ಪಿ.ಸಿ. ನಂಬರಃ 610/1 ರ ಕೆಂಪು ಹಂಚಿನ ಮನೆ ಮತ್ತು ಖುಲ್ಲಾ ಜಾಗ ಇರುತ್ತದೆ ಎಂದರೆ ಸರಿ. ನನ್ನ ತಾಯಿ ಹೆಸರಿಗೆ ನಾಗವಂದ ಗ್ರಾಮದ ವಿ.ಪಿ.ಸಿ. ನಂಬರಃ 222 ಕೆಂಪು ಹಂಚಿನ ಮನೆ ಇದೆ ಎಂದರೆ ಸರಿಯಲ್ಲ. ನನ್ನ ತಾಯಿ ಪೋತಿಯಾಗಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಪೋತಿಯಾಗಿ 4 ವರ್ಷಗಳಾಯಿತು. ನನ್ನ ತಾಯಿಯನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿಯವರನ್ನು ಪಕ್ಷಗಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

4. ನನ್ನ ತಂದೆ ಹಾಗೂ ಅಣ್ಣ ಅವರ ಜೀವಿತ ಕಾಲದಲ್ಲಿ ವ್ಯವಸಾಯ ಮಾಡುತ್ತಿದ್ದರು. ಸದರಿಯವರಿಗೆ ಅಷ್ಟೊಂದು ಉತ್ಪನ್ನ ಇರಲಿಲ್ಲ ಎಂದರೆ ಸಾಕ್ಷಿಯು ಮಾಮೂಲಿಯಾಗಿ ಬರುತ್ತಿತ್ತು ಎಂದು ನುಡಿಯುತ್ತಾರೆ. ನನ್ನ ತಂದೆ ಹಾಗೂ ಅಣ್ಣ ಊರಲ್ಲಿ ಸಾಲ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಅಣ್ಣನ ಪೋತಿಯ ಸುಮಾರು 2-3 ವರ್ಷಗಳ ಹಿಂದೆಯೇ ನನ್ನ ಮದುವೆಯಾಗಿತ್ತು. ಆಗ ನಾನು ನನ್ನ ಗಂಡನ ಮನೆಯಲ್ಲಿ ಇದ್ದೆ. ಆಗ ನನ್ನ ತವರು ಮನೆ ವ್ಯವಹಾರಗಳು ನನಗೆ ಅಷ್ಟೊಂದು ಗೊತ್ತಾಗುತ್ತಿರಲಿಲ್ಲ ಎಂದರೆ ಸರಿ. ಮುಂದುವರೆದು ಸಾಕ್ಷಿಯು ನಾನು ಬಂದಾಗೆಲ್ಲ ಹೇಳುತ್ತಿದ್ದರು ಎಂದು ನುಡಿಯುತ್ತಾರೆ.

5. ನನ್ನ ತಂದೆ ಹಾಗೂ ಅಣ್ಣ ಸಾಲ ತೀರಿಸುವ ಸಲುವಾಗಿ ಹೊಲ ಮಾರಲು ಪ್ರಯತ್ನಿಸಿದ್ದರು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಮಾರಾಟ ಮಾಡುವ ವಿಷಯವು 2 ನೇ ಪ್ರತಿವಾದಿಯ ತವರು ಮನೆಯವರಿಗೆ ಗೊತ್ತಾಗಿ ಅವರು ಹಣ ಕೊಟ್ಟು ಆಸ್ತಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 2 ರವರು ತವರು ಮನೆಯ ಸಾಲ ತೀರಿಸಲು ಹಣ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿಯರವರು ಹಣ ಕೊಟ್ಟಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ರಾಜಪ್ಪ ದಿನಾಂಕಃ 19.12.2017 ರಂದು ಪೋತಿಯಾಗಿರುತ್ತಾರೆ. ಆಗ ಪ್ರತಿವಾದಿ 2 ರವರ ತವರು ಮನೆಯವರು ನಮ್ಮ ಹಣಕ್ಕೆ ಆಸ್ತಿ ಬರೆದುಕೊಡಿ ಎಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆಗ ನೇಸ್ವಿ ಹಾಗೂ ನಾಗವಂದ ಗ್ರಾಮದ ಹಿರಿಯರು ಆಸ್ತಿ ಬರೆದುಕೊಡಲು ಹೇಳಿದರು ಎಂದರೆ ಸರಿಯಲ್ಲ.

6. ದಾವಾ ಶೆಡ್ಯೂಲ್‌ನ 6 ನೇ ಆಸ್ತಿಯ ಖರೀದಿ ಕರಾರು ಪತ್ರದಲ್ಲಿ ನಾನು ಫೋಟೋ ಕೊಟ್ಟು ಸಹಿ ಮಾಡಿರುತ್ತೇನೆ ಎಂದರೆ ಸರಿ. ಮುಂದುವರೆದು ಸಾಕ್ಷಿಯು ಅವರು ನನ್ನ ಅಣ್ಣನ ಹೆಣವನ್ನು ಕೊಡಲು ಅಡ್ಡಿಪಡಿಸಿ, ಗಲಾಟೆ ಮಾಡಿ, ನನ್ನ ತಂದೆಗೆ ಹೊಡೆದಿದ್ದರಿಂದ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಗಲಾಟೆ ಮಾಡಿದ್ದರಿಂದ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಪರ ವಕೀಲರು ದಾಖಲೆಯೊಂದನ್ನು ಸಾಕ್ಷಿಗೆ ಎದುರು ತೋರಿಸಿರುತ್ತಾರೆ.

7. ಸದರಿ ದಾಖಲೆಯು ದಾವಾ ಶೆಡ್ಯೂಲ್‌ನ 6 ನೇ ಆಸ್ತಿಯ ಕ್ರಯ ಕರಾರು ಪತ್ರ ಎಂದು ಹೇಳಿದ್ದು, ಸಾಕ್ಷಿಯು ಸದರಿ ಕ್ರಯ ಕರಾರು ಪತ್ರದಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಸದರಿ ಕ್ರಯ ಕರಾರು ಪತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ನಾನು ನಿಡಿ-1 ರಲ್ಲಿರುವ ವಿಷಯಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿ. ಪ್ರತಿವಾದಿ 2 ರವರ ತವರು ಮನೆಯಲ್ಲಿ ರೂ. 2,70,000/- ಗಳನ್ನು ಕೊಟ್ಟಿದ್ದರಿಂದ ನಾವು ನಿಡಿ-1 ನ್ನು ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

8. ದಾವಾ ಶೆಡ್ಯೂಲ್‌ನ 6 ನೇ ಆಸ್ತಿಯ ದಾಖಲೆಗಳು ಸರಿ ಇಲ್ಲದ ಕಾರಣ ಅವುಗಳನ್ನು ಸರಿಪಡಿಸಿ ಕೊಟ್ಟ ನಂತರ ರೂ. 5,000/- ಗಳನ್ನು ಕೊಡಲು ಹೇಳಿ ನಿಡಿ-1ನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಿರುವ ಕಾರಣ ದಾವಾ ಶೆಡ್ಯೂಲ್‌ನ 6 ನೇ ಆಸ್ತಿಯನ್ನು ದಾವೆ ಹೂಡುವ ಸಮಯದಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ಅಣ್ಣ ನನ್ನ ಮದುವೆ ಕಾಲಕ್ಕೆ ಇನ್ನಿತರ ಮನೆತನದ ಅವಶ್ಯಕತೆಗಳಿಗಾಗಿ ಸಾಲ ಮಾಡಿಕೊಂಡಿದ್ದರು ಆದರೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನನ್ನ ಮುಖ್ಯ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ . ಸದರಿ ಮಾಹಿತಿಯನ್ನು ನಾನೇ ವಕೀಲರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಮದುವೆ ಕಾಲಕ್ಕೆ ಬಂಗಾರ ಕೊಟ್ಟಿರುವುದರಿಂದ ನನಗೆ ದಾವಾ ಆಸ್ತಿಯಲ್ಲಿ ಹಿಸ್ಸೆ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.